ಡಾಕ್ಟರ್. ಅವರು ಹೇಳೋವರೆಗೂ ಎಲ್ಲೂ ಹೋಗಕೂಡದಂತೆ. ಕಾರಿನ ವ್ಯವಸ್ಥೆ ಮಾಡಿದ್ದೀನಿ. ಮನೆಗೆ ಹೋಗೋಣ ನಡೀರಿ' ಎಂದೆ.

ಅಪ್ಪ, 'ದುಡ್ಡು ಎಷ್ಟು ಖರ್ಚಾಯ್ತು' ಎಂದರು. ಕೇಳಿಸದವಳಂತೆ ಹೊರಬಂದೆ.

ಮನೆಗೆ ಬಂದಾಗ ಗೌರಕ್ಕ ರೂಂ ರೆಡಿ ಮಾಡಿದ್ದರು. ಬಿಸಿ ಬಿಸಿ ಅಡುಗೆ ಆಗಿತ್ತು. ಅಪ್ಪ ಮಲಗುವಾಗ, 'ಇಲ್ಲಿ ಎಷ್ಟು ದಿನಾ ಅಂತ ಇರಲಿಕ್ಕಾಗುತ್ತೆ. ದುರ್ಗಕ್ಕೆ ಹೋಗಬೇಕು. ಆದರೆ ನಿಮ್ಮಮ್ಮನ ಕೈಲಿ ಏನೂ ಸಾಗಲ್ಲ. ಮಗ ನೋಡಿದ್ರೆ ಫಾರಿನ್‌ನಲ್ಲಿ ಕೂತಿದ್ದಾನೆ' ಎಂದರು.



'ಜಗದೀಶನಿಗೆ ಫೋನ್ ಮಾಡಿದ್ದೆಯಲ್ಲಾ, ಯಾವಾಗ ಬರ್ತಾನಂತೆ?' ಅಮ್ಮ ಕೇಳಿದಳು. ಇಬ್ಬರ ಕಸಿವಿಸಿಯೂ ಅರ್ಥವಾಯ್ತು.

'ಪ್ರಾಜೆಕ್ಟ್ ಒತ್ತಡ ಇದೆಯಂತೆ. ಅದು ಮುಗಿಯೋವರೆಗೂ ರಜೆ ಸಿಗಲ್ಲ. ಆಮೇಲೆ ಬಂದು ನೋಡಿಕೊಂಡು ಹೋಗ್ತೀನಿ' ಅಂದು ಮುಗಿಸಿದ್ದ ಮಗ, 'ವಾಪಸ್ ಬಾರೋ ಅಂದ್ರೆ ಬರಲ್ಲ. ಅವನ ರಾಣಿ ಬಿಡಬೇಕಲ್ಲ. ಹೆತ್ತವರ ಗತಿಯೇನು ಅಂತ ಯೋಚಿಸಲ್ಲ' ಅಮ್ಮ ಕಹಿಯಾಗಿ ಹೇಳಿದಳು.

'ಮನಸ್ಸು ಶಾಂತವಾಗಿರಲಿ ಅಮ್ಮ. ನಾನು ನಾಳೆಯಿಂದ ಆಫೀಸಿಗೆ ಹೋಗಬೇಕು. ಅವಿಗೆ ರಜೆ ಇದೆ. ಗೌರಕ್ಕ ಮನೇಲಿರ್ತಾರೆ. ನಿಮಗೇನೂ ಸಮಸ್ಯೆ ಆಗಲ್ಲ. ಈಗ ಮಲಗಿ'ಎಂದು ಎದ್ದುಬಂದೆ.

ಮಲಗಿ ಹೊರಳಾಡಿದರೂ ನಿದ್ದೆ ಬರಲಿಲ್ಲ. ನಾನು ಪಟ್ಟ ಶ್ರಮ, ಮಾಡಿದ ಕರ್ತವ್ಯ ಯಾವುದಕ್ಕೂ ಇವರಲ್ಲಿ ಬೆಲೆಯೇ ಇಲ್ಲವೇ? ಒಬ್ಬರಾದರೂ, 'ಒಬ್ಬೇ ಇಷ್ಟೆಲ್ಲಾ ಮಾಡಿದೆಯಲ್ಲಮ್ಮಾ...' ಅಂತ ಸಂತೋಷ ಪಡಲಿಲ್ಲ. ಮಗ ಬರಲಿಲ್ಲ ಅಂತ ಗೋಳಾಡ್ತಾ ಇದ್ದಾರೆ.

ಅವರಿಬ್ಬರೂ ತುಂಬಾ ಬಾರಿ, 'ಥತ್, ಯಾಕಾದರೂ ಈ ಹೆಣ್ಣುಗಳು ಹುಟ್ಟಿದವ್ರೋ? ಉದ್ದಕ್ಕೂ ಸುರಿದು ಲಗ್ನ ಮಾಡಿ ಕಳಿಸಬೇಕು. ಒಂದಲ್ಲ ಎರಡಲ್ಲ ನಾಲ್ಕು ಹೆಣ್ಣುಮಕ್ಕಳು. ಇವರು ಹುಟ್ಟಲಿಲ್ಲ ಅಂತ ಯಾರು ಅಳ್ತಿದ್ದರು' ಎಂದು ಎಷ್ಟೋ ಬಾರಿ ಹಾರಾಡಿದ್ದಾರೆ. ಕೊಟ್ಟ ಹೆಣ್ಣು ಕುಲಕ್ಕೆ ಹೊರಗು ಅಂದಿದ್ದಾರೆ.

ಅಪ್ಪ ಬಡವರೇನಲ್ಲ. ಪಿಡಬ್ಲ್ಯೂಡಿಯಲ್ಲಿ ಎಂಜಿನಿಯರ್ ಆಗಿ ರಿಟೈರ್ ಆಗಿದ್ದಾರೆ. ಪೆನ್ಶನ್ ಬರುತ್ತೆ. ಚಿತ್ರದುರ್ಗದಲ್ಲಿ ಸ್ವಂತ ಮನೆ ಇದೆ. ಮೇಲಿನ ಮನೆಯ ಬಾಡಿಗೆಯೂ ಬರುತ್ತೆ. ಮೊದಲು ಸುಮಕ್ಕ, ಲೀಲಕ್ಕ, ಜಯಕ್ಕ, ನಂತರ ನಾನು ಹುಟ್ಟಿದಾಗ ಅವರಿಗೆ ರೋಸಿ ಹೋಗಿತ್ತು. ಹೆಣ್ಣುಮಕ್ಕಳೆಂದರೆ ಅತೀ ತಾತ್ಸಾರ. ಅವರಿಗೆ ವಂಶೋದ್ಧಾರಕ ಬೇಕಾಗಿದ್ದ. ಕೊನೆಗೆ ಜಗದೀಶ ಹುಟ್ಟಿದ್ದ. ನಾವೆಲ್ಲಾ ಹೇಗೋ ಬೆಳೆದೆವು. ಹೆತ್ತವರ ಪ್ರೀತಿ ಕಾಣದೆ